ಅ) ೧೯೯೨ರ ಒಲಂಪಿಕ್ಸ್‌ನಲ್ಲಿ ಭಾಗವಹಿಸುವ ಕರ್ನಾಟಕದ ಪುರುಷ/ಮಹಿಳಾ ಕ್ರೀಡಾ ಪಟುಗಳಿಗೆ ತರಬೇತಿ ನೀಡುವ ಯಾವುದಾದರೂ ಯೋಜನೆಗಳು ಸರ್ಕಾರದಲ್ಲಿಯೇ?

ಆ) ಹಾಗಿದ್ದಲ್ಲಿ, ಕ್ರೀಡಾಪಟುಗಳಿಗೆ ವಿಸ್ತರಿಸಲಾದ ಸವಲತ್ತುಗಳು.

ಇ) ಇಂತಹ ಸವಲತ್ತುಗಳನ್ನು ನೀಡಲು ಗುರುತಿಸಲಾದ ಕ್ರೀಡಾಪಟುಗಳು.

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಿಂದ ರಾಯಚೂರ ಜಿಲ್ಲೆಯಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ

೧೪೨೫ (೨೧೫೪) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಲೋಕೋಪಯೋಗಿ ಇಲಾಖೆಯಿಂದ ರಾಯಚೂರು ಜಿಲ್ಲೆಯಲ್ಲಿ ಎಷ್ಟು ರಸ್ತೆಗಳನ್ನು ಮೇಲ್ದರ್ಜೆಗೆ ಪರಿವರ್ತಿಸಲು ಆಯ್ಕೆ ಮಾಡಲಾಗಿದೆ? (ರಸ್ತೆಯ ಹೆಸರು, ಉದ್ದ ಇತ್ಯಾದಿ ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಈ ಬಗ್ಗೆ ಆದ ವೆಚ್ಚ.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಸರ್ಕಾರದ ಆದೇಶ ಸಂಖ್ಯೆ ಪಿ.ಡಬ್ಲ್ಯೂ. ಡಿ. ೬೮ ಸಿಆರ್‌ಎಂ ೮೦ ದಿನಾಂಕ ೧೮-೨-೧೯೯೨ರ ಪ್ರಕಾರ, ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಯಲ್ಲಿರುವ ರಸ್ತೆಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ೫೦ ಕಿ. ಮೀ. ಮೀರದಂತೆ ಒಟ್ಟು ೧೦೦೦೦ ಕಿ. ಮೀ. ಉದ್ದದ ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ಅನುಮೋದನೆ ನೀಡಲಾಗಿದೆ. ಆದರಂತೆ ರಾಯಚೂರು ಜಿಲ್ಲೆಯ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ೫೦ ಕಿ. ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ನಿರ್ಧರಿಸಲಾಗುವುದು.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆರೂರು ಸೇತುವೆ ನಿರ್ಮಿಸುವ ಕುರಿತು

೧೪೨೭ (೨೨೧೦) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಕೊಳಲಗಿರಿ ಕುಂಜಾಲು ರಸ್ತೆಯ ಮಧ್ಯೆ ಮಡಹೊಳೆಗೆ ಬೆಳ್ಕಾರು ಸ್ಥಳದಲ್ಲಿ ಆರೂರು

ಸೇತುವೆ ನಿರ್ಮಿಸುವ ಕುರಿತಂತೆ ಪರಿಸರದ ನಾಗರೀಕರ ಬೇಡಿಕೆ ಇಲಾಖಾ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಈವರೆಗೆ ಕೈಗೊಂಡ ಕ್ರಮವೇನು? ಇಕ್ಕೆಡೆಗಳ ಕೂಡು ರಸ್ತೆ ಪೂರ್ಣಗೊಂಡು ಸೇತುವೆ ಕಾಮಗಾರಿ ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು?

ಇ) ಈ ಸೇತುವೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಇಲಾಖೆ ಸಚಿವರು):-

ಅ) ಬಂದಿರುತ್ತದೆ.

ಆ) ಇದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ. ಈ ಕಾಮಗಾರಿಗೆ ಈವರೆವಿಗೆ ರೂ. ೨,೬೧,೯೯-೦೦ ಖರ್ಚಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಯನ್ನು ನಿಲ್ಲಿಸಿರುವುದರಿಂದ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದುಗೊಳಿಸುವ ಬಗ್ಗೆ ಕ್ರಮ ಕೈಗೊಂಡಿದ್ದು, ಆದಾದ ನಂತರ ಉಳಿಕೆ ಕಾಮಗಾರಿಯನ್ನು ಪುನಃ ಗುತ್ತಿಗೆ ಕರೆದು ಅಥವಾ ಇಲಾಖಾವತಿಯಿಂದಲೇ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಕಾಮಗಾರಿಗೆ ೧೩.೮೪ ಲಕ್ಷ ರೂ.ಗಳ ಅನುದಾನ ಬೇಕಾಗಿದ್ದು ಇದನ್ನು ಜಿಲ್ಲಾಪರಿಷತ್ ಅನುದಾನದಲ್ಲಿ ನೀಡುವಂತೆ ಜಿಲ್ಲಾಪರಿಷತ್‌ಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಉಡುಪಿ ತಾಲ್ಲೂಕು ಕುಕ್ಕೇಹಳ್ಳಿ ಪೇತ್ರಿ ರಸ್ತೆಯ ಮಧ್ಯ ಹರಿಯುವ ಹೊಳೆಗೆ ಸೇತುವೆ ನಿರ್ಮಾಣ

೧೪೨೯ (೨೨೧೨) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪೆರ್ಡೂರು ಹರಿಕಂಡಿಗೆ ಕುಕ್ಕೇಹಳ್ಳಿ ಪರಿಸರದ ನಾಗರೀಕರು ಪೇತ್ರಿಗೆ ಹೋಗಬೇಕಾದಲ್ಲಿ ಕೆ. ಜಿ. ರೋಡ್ ಮುಖಾಂತರ ೧೫ ಕಿ. ಮಿ. ಸುತ್ತಿ ಬಳಸಿ ಹೋಗಬೇಕಾದುದು ನಿಜವಲ್ಲವೇ?

ಆ) ಉಡುಪಿ ತಾಲ್ಲೂಕು ಕುಕ್ಕೇಹಳ್ಳಿ ಪೇತ್ರಿ ರಸ್ತೆಯ ಪೂರ್ಣಗೊಳ್ಳುವಿಕೆಗೆ ಮಧ್ಯೆ ಹರಿಯುವ ಮಡಿ ಹೊಳೆಗೆ ಸೇತುವೆ ನಿರ್ಮಿಸುವ ಕುರಿತಂತೆ ಜನರ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಈ) ಈ ಭಾಗದ ಬಹುಜನರ ಬೇಡಿಕೆಯಾದ ಮಡಿಹೊಳೆ ಸೇತುವೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ನಿಜ.

ಆ) ಬಂದಿರುತ್ತದೆ.